ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

ವಿಷಯ: ಪ್ರಭಾರ ಭತ್ಯೆ ದರವನ್ನು ಪರಿಷ್ಕರಿಸುವ ಬಗ್ಗೆ

*****

ಮು. ಇ. (ತಾಂತ್ರಿಕ). ನಿಗಮ ಕಾರ್ಯಾಲಯ, ಮೈಸೂರು
ಸಂ. 4366
ತಾ. 29/11/22

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 08 ಎಸ್ ಆರ್ ಎಸ್ 2018, ದಿನಾಂಕ: 30.04.2019.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/780/2019-20, ದಿನಾಂಕ: 20.05.2019.
3. ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 14(ಇ) ಎಸ್ ಆರ್ ಎಸ್ 2022, ದಿನಾಂಕ: 23.09.2022.
4. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ಇವರಿಂದ ಅನುಮೋದಿಸಲ್ಪಟ್ಟ ಟಿಪ್ಪಣಿ ದಿನಾಂಕ: 19.10.2022.

**ಪೀಠಿಕೆ:-**

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 38 ಮತ್ತು 68 ರ ಅಡಿಯಲ್ಲಿ, ನೌಕರರನ್ನು ಸ್ವತಂತ್ರ ಪ್ರಭಾರದಲ್ಲಾಗಲೀ ಅಥವಾ ತಮ್ಮ ಹುದ್ದೆಯ ಕರ್ತವ್ಯದ ಜೊತೆ ಬೇರೊಂದು ಹುದ್ದೆಯ ಹೆಚ್ಚಿನ ಪ್ರಭಾರದಲ್ಲಿರಿಸಿದಾಗ, ಪ್ರಭಾರದಲ್ಲಿರಿಸಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತದಲ್ಲಿ ಮೊದಲ ಮೂರು ತಿಂಗಳವರೆಗೆ ಶೇಕಡ 7.5 ರ ದರದಲ್ಲಿ, ಆ ನಂತರದ ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಶೇಕಡ 15 ರ ದರದಲ್ಲಿ ಪ್ರಭಾರ ಭತ್ಯೆಯ ದರವನ್ನು ನಿಗದಿಪಡಿಸಿ, ಸರ್ಕಾರವು ಆದೇಶ ಸಂಖ್ಯೆ: ಎಫ್ ಡಿ 08 ಎಸ್ ಆರ್ ಎಸ್ 2018, ದಿನಾಂಕ: 30.04.2019 ನ್ನು ಹೊರಡಿಸಿರುತ್ತದೆ. ಸರ್ಕಾರದ ಸದರಿ ಆದೇಶವನ್ನು ಉಲ್ಲೇಖ-2 ರ ಆದೇಶದನ್ವಯ ನಿಗಮದಲ್ಲಿ ಅಳವಡಿಸಿಕೊಳ್ಳಲಾಗಿತ್ತು.

ಪ್ರಸ್ತುತ, ಸರ್ಕಾರದ ಇಲಾಖೆಗಳಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇದ್ದು, ಸುಗಮ ಆಡಳಿತಕ್ಕಾಗಿ ಹಲವಾರು ಸಿಬ್ಬಂದಿಗಳನ್ನು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಲ್ಲಿ ಅಧಿಕ ಪ್ರಭಾರ/ಸಮವರ್ತಿ ಪ್ರಭಾರದಲ್ಲಿರಿಸಲಾಗಿದ್ದು, ಸದರಿಯವರುಗಳು ಹೆಚ್ಚಿನ ಕಾರ್ಯಭಾರದ ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಅಧಿಕಾರಿ/ನೌಕರರಿಗೆ ಪ್ರಭಾರ ಭತ್ಯೆ ಮಂಜೂರು ಮಾಡಲು ಅನುಸರಿಸುತ್ತಿರುವ ಕಾರ್ಯವಿಧಾನದ ಜಟಿಲತೆಯನ್ನು ಸರಳಗೊಳಿಸುವ ನಿಟ್ಟಿನಲ್ಲಿ, ಎರಡು ಹಂತಗಳಲ್ಲಿ ನೀಡಲಾಗುತ್ತಿರುವ ಪ್ರಭಾರ ಭತ್ಯೆಯನ್ನು ವಿಲೀನಗೊಳಿಸಿ, ಒಂದೇ ಹಂತದಲ್ಲಿ ಪ್ರಭಾರ ಭತ್ಯೆಯನ್ನು ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರಿ ಅಧಿಕಾರಿ/ನೌಕರರನ್ನು ಸ್ವತಂತ್ರ

DNM (T)

AGM T-4

W/C GM (MIS)

ಪ್ರಭಾರದಲ್ಲಿ ಅಥವಾ ತಮ್ಮ ಹುದ್ದೆಯ ಕರ್ತವ್ಯದ ಜೊತೆ ಬೇರೊಂದು ಹುದ್ದೆಯ ಹೆಚ್ಚಿನ ಪ್ರಭಾರದಲ್ಲಿರಿಸಿದ ಸಂದರ್ಭದಲ್ಲಿ, ಅಂತಹ ಪ್ರಭಾರದಲ್ಲಿರಿಸಿದ ಅಧಿಕಾರಿ/ನೌಕರರ ಮೂಲ ವೇತನದ ಶೇಕಡ 15 ರ ದರದಲ್ಲಿ ಪ್ರಭಾರ ಭತ್ಯೆಯನ್ನು ನಿಗದಿಪಡಿಸಿ, ಸರ್ಕಾರವು ದಿನಾಂಕ: 23.09.2022 ರ ಆದೇಶವನ್ನು ಹೊರಡಿಸಿರುತ್ತದೆ. ಸರ್ಕಾರದ ಸದರಿ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಂಡು, ಈ ಕೆಳಕಂಡಂತೆ ಆದೇಶಿಸಿದೆ:-

**ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/780/2019-20, ಬೆಂಗಳೂರು, ದಿನಾಂಕ: 29 OCT 2022**

ಕವಿಪ್ರನಿನಿ ನೌಕರರ ಸೇವಾ ನಿಬಂಧನೆಗಳ ನಿಬಂಧನೆ-35 ಮತ್ತು 51 ರಂತೆ ನಿಗಮದ ಅಧಿಕಾರಿ/ನೌಕರರನ್ನು ಸ್ವತಂತ್ರ ಪ್ರಭಾರದಲ್ಲಾಗಲೀ ಅಥವಾ ತಮ್ಮ ಹುದ್ದೆಯ ಕರ್ತವ್ಯದ ಜೊತೆ ಬೇರೊಂದು ಹುದ್ದೆಯ ಹೆಚ್ಚಿನ ಪ್ರಭಾರದಲ್ಲಿರಿಸಿದ ಸಂದರ್ಭದಲ್ಲಿ, ಅಂತಹ ಪ್ರಭಾರದಲ್ಲಿರಿಸಿದ ಅಧಿಕಾರಿ/ನೌಕರರ ಮೂಲ ವೇತನದ ಶೇಕಡ 15 (ಹದಿನೈದು) ರ ದರದಲ್ಲಿ ಪ್ರಭಾರ ಭತ್ಯೆಯನ್ನು ನಿಗದಿಪಡಿಸಿ ಆದೇಶಿಸಲಾಗಿದೆ.

ಕವಿಪ್ರನಿನಿ ನೌಕರರ ಸೇವಾ ನಿಬಂಧನೆಗಳ ನಿಬಂಧನೆ-35 ಮತ್ತು 51, ಮೇಲಿನಂತೆ ತಿದ್ದುಪಡಿಯಾಗಿರುತ್ತದೆ ಹಾಗೂ ಪ್ರಭಾರ ಭತ್ಯೆಯನ್ನು ಪಾವತಿಸುವ ವಿಷಯದಲ್ಲಿನ ಇತರೆ ನಿಯಮ ಮತ್ತು ಷರತ್ತುಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಪ್ರಭಾರ ಭತ್ಯೆಯ ಪರಿಷ್ಕೃತ ದರ ದಿನಾಂಕ: 01.09.2022 ರಿಂದ ಜಾರಿಗೆ ಬರುತ್ತದೆ.

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಮೆಮೋ**

**ಕ್ರಮಾಂಕ:ಚಾವಿಸನಿನಿ/ಆ ಮತ್ತು ಮಾ.ಸಂ./05/04/2022-23/** 45-1265 **ದಿನಾಂಕ: 24 NOV 2022**

ನಿರ್ದೇಶಕರು(ಆ ಮತ್ತು ಮಾಸಂ), ಕವಿಪ್ರನಿನಿ, ಬೆಂಗಳೂರುರವರ ಆದೇಶ ಪತ್ರ ಸಂಖ್ಯೆ:ಕವಿಪ್ರನಿನಿ/ಬಿ16/780/2019-20 ದಿನಾಂಕ:29.10.2022ರ ಆದೇಶವನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾ.ವಿ.ಸ.ನಿ.ನಿ., ಮೈಸೂರು.

ಪು.ತಿ.ನೋ.

ಗೆ:

- ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ, ಮೈಸೂರುರವರ ಅವಗಾಹನೆಗಾಗಿ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಹಾಸನ/ಮೈಸೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ.
- ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ., ಮೈಸೂರು.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ/ಲೆಕ್ಕಾಧಿಕಾರಿ(ಆಂ.ಪ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಮೈಸೂರುರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂ.ನಿ), ನಿಗಮ ಕಛೇರಿ, ಮೈಸೂರು ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮುಖ್ಯ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪ್ರತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮುಖ್ಯ ಆರ್ಥಿಕ ಸಲಹೆಗಾರರುರವರ ಗಮನಕ್ಕೆ ತರುವಂತೆ ಕೋರಿದೆ.
- ಸ-2(ಆ ಮತ್ತು ಮಾ.ಸಂ)/ಪ್ರ.ಕ.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

- ಉಪಾಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ ರಿ(659), ಚಾವಿಸನಿನಿ., ಎಂ.ಪಿ.ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
- ಉಪಾಧ್ಯಕ್ಷರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಲ್ಯಾಣ ಸಂಸ್ಥೆ ರಿ(466), ಚಾವಿಸನಿನಿ., ಎಂ.ಪಿ.ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
- ಉಪಾಧ್ಯಕ್ಷರು, ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಎಂ.ಪಿ.ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
- ಉಪಾಧ್ಯಕ್ಷರು, ಕವಿಮಂ ಇಂಜಿನಿಯರ್ ಗಳ ಸಂಘ, ಕಡಕೊಳ, ಮೈಸೂರು.
- ಕಾರ್ಯದರ್ಶಿ, ಲೆಕ್ಕಾಧಿಕಾರಿಗಳ ಸಂಘ, ಚಾವಿಸನಿನಿ., ಎಂ.ಪಿ.ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.